KABR320132282022

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ದೇವನಹಳ್ಳಿ.</u>**

**ದಿನಾಂಕ 25ನೇ ಮಾರ್ಚ್ 2026.**

**<u>ಉಪಸ್ಥಿತರು</u>**

**ಶ್ರೀ.ವೆಂಕಟೇಶ.ಎನ್., ಬಿ.ಎ.ಎಲ್.ಎಲ್.ಬಿ., ಎಲ್.ಎಲ್.ಎಮ್.,**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ದೇವನಹಳ್ಳಿ.

**<u>ದಂಡ ಪ್ರಕರಣ ಸಂಖ್ಯೆ.11648/2022</u>**

ಫಿರ್ಯಾದುದಾರರುಃ **ಬಾಗಲೂರು ಪೊಲೀಸ್ ಠಾಣೆ**

**(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

ಆರೋಪಿಗಳುಃ **1.** **ಗ್ಯಾಮ್ ರಂಜನ್**
ಸೇಟ್ ಮ್ಯಾನೇಜರ್ ಬ್ರಿಗೇಡ್,
ಎಲ್ಡೊರಾಡೋ,
ಕೆಐಎಡಿಬಿ ಬಾಗಲೂರು ಗ್ರಾಮ,
ಬೆಂಗಳೂರು ನಗರ, ಕರ್ನಾಟಕ-562149.

**2.** **ಶ್ರೀನಿವಾಸ್**
ವಯಸ್ಸು ಸುಮಾರು 36 ವರ್ಷ,
ಯೋಜನೆಯ ಉಸ್ತುವಾರಿ, ಪದ್ಮಜಾ ಇಂಜಿನಿಯರಿಂಗ್,
ಸೇವೆ, ಕೆಐಎಡಿಬಿ ಬಾಗಲೂರು ಗ್ರಾಮ,
ಬೆಂಗಳೂರು ನಗರ, ಕರ್ನಾಟಕ-562149.

**3.** **ಸಂತೋಷ್**
ಪ್ರೊಪರೇಟರ್, ಪದ್ಮಜಾ ವಾಟರ್ ಪ್ರೊಫಿಂಗ್,
ಬೆಂಗಳೂರು ನಗರ, ಕರ್ನಾಟಕ.

**(ಪ್ರತಿನಿಧಿಸಿದವರುಃ ಶ್ರೀ. ಸಿ.ಎಂ., ವಕೀಲರು)**

| | | | |
|---|---|---|---|
| ಪ್ರಕರಣ ನಡೆದ ದಿನಾಂಕ : | 03.11.2021 | | |
| ಪ್ರಕರಣ ದಾಖಲಾದ ದಿನಾಂಕ : | 03.11.2021 | | |
| ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ : | 05.01.2026 | | |
| ವಿಚಾರಣೆ ಮುಕ್ತಾಯವಾದ ದಿನಾಂಕ : | 17.03.2026 | | |
| ಆಪಾದಿಸಲ್ಪಟ್ಟ ಅಪರಾಧಗಳು : | ಭಾರತೀಯ ದಂಡ ಸಂಹಿತೆ ಕಲಂ 304(ಎ) | | |
| ಪ್ರಕರಣ ಮುಕ್ತಾಯವಾದ ದಿನಾಂಕ : | **25.03.2026** | | |
| ನ್ಯಾಯಾಧೀಶರ ಅಭಿಪ್ರಾಯ : | ದೋಷಮುಕ್ತ | | |
| ನ್ಯಾಯಾಂಗ ಬಂದನವನ್ನು ಅನುಭವಿಸಿದ ಅವಧಿ : | ವರ್ಷ | ತಿಂಗಳು | ದಿನ |
| | **04** | **04** | **22** |

**: <u>ತೀರ್ಪು</u> :**

ಬಾಗಲೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಈ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. <u>ಅಭಿಯೋಜನೆಯಂತೆ ಈ ಪ್ರಕರಣದ ಮುಖ್ಯ ಸಾರಾಂಶ ಈ ಕೆಳಕಂಡಂತೆ ಇದೆ:</u>**

ಚಾಸಾ-1 ರವರಿಗೆ ಮೃತ ಮಹಂಗು ಕಹರ್ ಎಂಬುವನು (ಹೆಂಡತಿಯ ತಮ್ಮ) ಭಾಮೈದನಾಗಿರುತ್ತಾನೆ. ಚಾಸಾ-1 ರವರು ಮತ್ತು ಅವರ ಮಗ ಚಾಸಾ-4 ರಾಜುಕುಮಾರ್ ಸಿಂಗ್ ಹಾಗೂ ಮೃತ ಮಹಂಗು ಕಹರ್ ಎಂಬುವರು ಬೆಂಗಳೂರು ನಗರ ಈಶಾನ್ಯ ವಿಭಾಗದ ಬಾಗಲೂರು ಪೊಲೀಸ್ ಠಾಣಾ ಸರಹದ್ದಿನ ಬಾಗಲೂರು ಗ್ರಾಮದ ಹತ್ತಿರವಿರುವ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾದಲ್ಲಿ Brigade EL-DORADO ಕಂಪನಿ ವತಿಯಿಂದ ಕಟ್ಟುತ್ತಿರುವ ಅಪಾರ್ಟ್‌ಮೆಂಟ್ ಪ್ರಾಜೆಕ್ಟ್ ನಲ್ಲಿ ಪದ್ಮಜಾ ಇಂಜಿನಿಯರಿಂಗ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ವತಿಯಿಂದ ಹೆಲ್ಪರ್ ಕೆಲಸ ಮಾಡುತ್ತಿರುತ್ತಾರೆ. ದಿನಾಂಕ 03.11.2021 ರಂದು ಬೆಳಿಗ್ಗೆ ಸುಮಾರು 10.30 ಗಂಟೆಯಿಂದ 10.45 ಗಂಟೆಯಲ್ಲಿ Brigade EL-DORADO ಕಂಪನಿ ವತಿಯಿಂದ ಕಟ್ಟುತ್ತಿರುವ ಅಪಾರ್ಟ್‌ಮೆಂಟ್ ಪ್ರಾಜೆಕ್ಟ್

ನ ಸೈಟ್ ನಲ್ಲಿರುವ ಜಿ-ಟವರ್ ಎಂಬ ಬಿಲ್ಡಿಂಗ್ ಮುಂಭಾಗದಲ್ಲಿ ಮೃತ ಮಹಂಗು ಕಹರ್ ಮತ್ತು ಚಾಸಾ-4 ರಾಜುಕುಮಾರ್ ಸಿಂಗ್ ರವರು ಜೊತೆಯಲ್ಲಿ ಹೆಲ್ಮೇಟ್ ಹಾಕಿಕೊಂಡು ಕೆಲಸ ಮಾಡುತ್ತಿರುವಾಗ್ಗೆ ಬಿಲ್ಡಿಂಗ್ ನ ಮೇಲಿನಿಂದ ಮಹಂಗು ಕಹರ್ ಎಂಬುವರ ತಲೆಯ ಮೇಲೆ ಒಂದು ಇಟ್ಟಿಗೆಯು ಬಿದ್ದು ಆತನು ಹಾಕಿಕೊಂಡಿದ್ದ ಹೆಲ್ಮೇಟ್ ತೂರಿ ಆತನ ತಲೆಗೆ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತ ಹೊಂದಿರುತ್ತಾರೆ. ಆದ್ದರಿಂದ Brigade EL-DORADO ಕಂಪನಿ ವತಿಯಿಂದ ಕಟ್ಟುತ್ತಿರುವ ಅಪಾರ್ಟ್ ಮೆಂಟ್ ಪ್ರಾಜೆಕ್ಟ್ ನ ಸೈಟ್ ನಲ್ಲಿರುವ ಜಿ-ಟವರ್ ಎಂಬಲ್ಲಿ 1ನೇ ಆರೋಪಿಯು ಸೇಫ್ಟಿ ಆಫೀಸರ್ ಆಗಿದ್ದು ಅಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಸರಿಯಾಗಿ ಮಾಹಿತಿ ನೀಡಿ ಸುರಕ್ಷತಾ ಕ್ರಮಗಳನ್ನು ತಿಳಿಸದೇ ನಿರ್ಲಕ್ಷತೆಯಿಂದ ಇದ್ದು ಮತ್ತು ಅಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಬೇಕಾದ ಅತ್ಯುತ್ತಮ ಸುರಕ್ಷತಾ ಸಾಧನಗಳನ್ನು ನೀಡದೆ, ಸುರಕ್ಷತಾ ಕ್ರಮಗಳನ್ನು ಕೈ ಕೊಳ್ಳದೇ, ಕೆಲಸಗಾರರಿಗೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸದೇ, ಬಿಲ್ಡಿಂಗ್ ನ ಪ್ರತಿ ಮಹಡಿಗೂ ಸುರಕ್ಷತೆಗಾಗಿ ಬಲೆಗಳನ್ನು ಹಾಕದೆ ಅಜಾಗರೂಕತೆಯಿಂದ, ನಿರ್ಲಕ್ಷತೆಯಿಂದ ಕೆಲಸಗಾರರಿಂದ ಅಲ್ಲಿ ಕೆಲಸ ಮಾಡಿಸುತ್ತಿದ್ದ ಪದ್ಮಜಾ ಇಂಜಿಯರಿಂಗ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕೋ-ಆರ್ಡಿನೇಟರ್ ಆದ 2ನೇ ಆರೋಪಿ ಶ್ರೀನಿವಾಸ್ ಮತ್ತು ಈ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆದ 3ನೇ ಆರೋಪಿ ಸಂತೋಷ ರವರುಗಳ ನಿರ್ಲಕ್ಷತೆ, ಅಜಾಗರೂಕತೆ, ಬೇಜವಾಬ್ದರಿತನದಿಂದಲೇ ಮೃತ ಮಹಂಗು ಕಹರ್ ಎಂಬುವರಿಗೆ ಕೆಲಸ ಮಾಡುವ ಸ್ಥಳದಲ್ಲಿ ಅವರ ತಲೆಯ ಮೇಲೆ ಇಟ್ಟಿಗೆ ಬಿದ್ದು ಸ್ಥಳದಲ್ಲಿಯೇ ಮರಣ ಹೊಂದಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಹಾಗೂ ಸಂಗ್ರಹಿಸಿದ ಸಾಕ್ಷಾಧಾರಗಳಿಂದ ಮತ್ತು ತನಿಖೆಯಿಂದ ದೃಢಪಟ್ಟಿದೆ. ಅದರಂತೆ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

**3.** ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ಆರೋಪಿಗಳ ವಿರುದ್ಧ ಸಂಜ್ಞಾನೆಯನ್ನು ತೆಗೆದುಕೊಂಡು ಸಮನ್ಸ್ ಜಾರಿ ಮಾಡಲಾಗಿದೆ. ಆರೋಪಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ.

**4.** ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಹಾಗೂ ಇತರೆ ದಾಖಲಾತಿಗಳನ್ನು ಪೂರೈಸಲಾಯಿತು. ಆಪಾದನೆಯನ್ನು ರಚಿಸುವ ಪೂರ್ವದಲ್ಲಿ ವಕೀಲರ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರವರ ವಾದ ಕೇಳಿ ಆಪಾದನೆಯನ್ನು ರಚಿಸಲಾಯಿತು. ಅದನ್ನು ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಮ್ಮ ವಿರುದ್ದ ಹೊರಿಸಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**5.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಋಜುವಾತುಪಡಿಸಲು ಅವಕಾಶ ನೀಡಲಾಗಿ ತಮ್ಮ ಪರವಾಗಿ ಆರೋಪಿಗಳ ವಿರುದ್ದ ಆಪಾದನೆಯನ್ನು ಸಾಬೀತುಪಡಿಸುವ ಉದ್ದೇಶದಿಂದ ಪ್ರಾಸಾ.1 ರಿಂದ 9 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ನಿಪಿ.1 ರಿಂದ 15 ರವರೆಗಿನ ದಾಖಲಾತಿಗಳನ್ನು ಹಾಗೂ ಮುದ್ದೆ ಮಾಲು.1 ಮತ್ತು 2ನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

**6.** ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ಬಳಿಕ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿಗಳ ವಿರುದ್ದ ಕಂಡುಬರುವ ಸಾಕ್ಷಿ ವಿಚಾರಣೆ ಅಂಶಗಳನ್ನು ಓದಿ ಹೇಳಲಾಗಿ, ಆರೋಪಿಗಳು ತಮ್ಮ ವಿರುದ್ದದ ಸಾಕ್ಷ್ಯಾಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವಿರುವುದಿಲ್ಲವೆಂದು ನುಡಿದಿರುತ್ತಾರೆ.

**7.** ಎರಡು ಕಡೆಯ ವಾದವನ್ನು ಕೇಳಲಾಯಿತು.

**8. ಪ್ರಸ್ತುತ ಪ್ರಕರಣದಲ್ಲಿ ಈ ಕೆಳಕಂಡ ಅಂಶಗಳು ಪರಿಗಣನೆಗೆ ಕಂಡುಬಂದಿರುತ್ತವೆ.**

**1.** ದಿ 03.11.2021 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ 1 ರಿಂದ 3ನೇ ಆರೋಪಿತರು ಬ್ರಿಗೇಡ್ ಕಂಪನಿ ವತಿಯಿಂದ ಕಟ್ಟುತ್ತಿರುವ ಅಪಾರ್ಟ್ಮೆಂಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲಸಗಾರಿರಿಗೆ ಯಾವುದೇ ಸುರಕ್ಷಾ ಕ್ರಮಗಳನ್ನು ತಿಳಿಸದೇ ಹಾಗೂ ಅವರಿಗೆ ಬೇಕಾದ ಸುರಕ್ಷತಯ ಸಾಧನಗಳನ್ನು ನೀಡದೇ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಹಾಗೂ ಅವರಿಗೆ ಅರಿವು ಮೂಡಿಸದೇ ಕಟ್ಟಡದ ಪ್ರತಿ ಮಹಡಿಗೂ ಸುರಕ್ಷತೆಗಾಗಿ ಬಲೆಗಳನ್ನು ಹಾಕದೇ ಅಜಾಗರುಕತೆಯ ಪರಿಣಾಮವಾಗಿ ಸದರಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಂಗು ಕಹರ್ ರವರ ತಲೆಯ ಮೇಲೆ ಇಟ್ಟಿಗೆ ಬಿದ್ದು ಅವರ ಸ್ಥಳದಲ್ಲಿ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

**2**. ಯಾವ ಆದೇಶ?

**9**. ಈ ಮೇಲ್ಕಂಡ ಅಂಶಗಳಿಗೆ ಈ ಮುಂದೆ ಹೇಳಲಾದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಲಾಗಿದೆಃ-

ಅಂಶ 1: **ನಕಾರಾತ್ಮಕವಾಗಿ**
ಅಂಶ 2: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

**ಕಾರಣಗಳು**

**10.** **ಅಂಶ 1:-** ಅಭಿಯೋಜನೆಯವರು ಆರೋಪಿಗಳ ವಿರುದ್ದ ಹೊರಿಸಿರುವ ಆಪಾದನೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರಾಸಾ.1 ರಿಂದ 9 ರವರನ್ನು ತಮ್ಮ ಪರ ಸಾಕ್ಷಿಗಳಾಗಿ ವಿಚಾರಣೆಗೆ ಒಳಪಡಿಸಿದ್ದು, ನಿಪಿ-1 ರಿಂದ 15ನ್ನು ಹಾಗೂ ಮುದ್ದೆ ಮಾಲು.1 ಮತ್ತು 2ನ್ನು ದಾಖಲಾತಿಗಳನ್ನು ತನ್ನ ಪರವಾಗಿ ಗುರ್ತಿಸಿಕೊಂಡಿರುತ್ತಾರೆ.

**11**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 1 ರವರನ್ನು ಪ್ರಾಸಾ 1** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-2 ರಿಂದ 7 ರವರ ಪರಿಚಯ ಇರುವುದಿಲ್ಲ. ಆರೋಪಿಗಳ ಪರಿಚಯ ಇರವುದಿಲ್ಲ ಮೃತ ಮಹಂಗು ಕಹರ್ ನನ್ನ ಹೆಂಡತಿಯ ತಮ್ಮನಾಗಬೇಕು, ಆತ ಸುಮಾರು 4 ವರ್ಷಗಳ ಹಿಂದೆ ಮೃತಪಟ್ಟಿದ್ದು, ಹೇಗೆ ಮತ್ತು ಯಾವ ಕಾರಣದಿಂದ ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ ಈ ಸಂಬಂಧ ನಾನು ಯಾವುದೇ ದೂರು ನೀಡಿರುವುದಿಲ್ಲ. ಸಾಕ್ಷಿಗೆ ಈಗ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಪೋಲೀಸರು ಯಾವ ಕಾರಣಕ್ಕೆ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡೆಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಒಂದು ಇಟ್ಟಿಗೆ ಮತ್ತು ಹೆಲ್ಮೆಟ್ ಗಳನ್ನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿ ಕಡತದಲ್ಲಿರುವ ಪೋಟೋವನ್ನು ನೋಡಿ ಗುರುತಿಸಿರುವುದಿಲ್ಲ.

**12**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 2 ರವರನ್ನು ಪ್ರಾಸಾ 2** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-3 ರವರ ಪರಿವಯ ಇರುತ್ತದೆ. ಆರೋಪಿಗಳ ಪರಿಚಯ ಇರುತ್ತದೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಯಾವ ಕಾರಣಕ್ಕೆ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಒಂದು ಇಟ್ಟಿಗೆ ಮತ್ತು ಹೆಲ್ಮೆಟ್ ಗಳನ್ನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿ ಕಡತದಲ್ಲಿರು ಫೋಟೋವನ್ನು ನೋಡಿ ಗುರುತಿಸಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**13**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 3 ರವರನ್ನು ಪ್ರಾಸಾ 3** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-2 ರವರ ಪರಿಚಯ ಇರುತ್ತದೆ. ಆರೋಪಿಗಳ ಪರಿಚಯ ಇರುತ್ತದೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಯಾವ ಕಾರಣಕ್ಕೆ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿರುವುದಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡೆಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಒಂದು ಇಟ್ಟಿಗೆ ಮತ್ತು ಹೆಲ್ಮೆಟ್ ಗಳನ್ನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿ ಕಡತದಲ್ಲಿರುವ ಫೋಟೋವನ್ನು ನೋಡಿ ಗುರುತಿಸಿರುವುದಿಲ್ಲ.

**14**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 13 ರವರನ್ನು ಪ್ರಾಸಾ 4** ಎಂದು ವಿಚಾರಣೆಗೆ ಒಳಪಡಿಸಿದ್ದು, ದಿ 04.11.2021 ರಂದು ನಾನು ಬೆಳಿಗ್ಗೆ 08.00 ಗಂಟೆಗೆ ಚಾಸಾ-14 ರವರು ನನ್ನನ್ನು ಕರೆದು ತಮ್ಮೊಂದಿಗೆ ಸ್ಥಳ ಮಹಜರ್ ಗೆ ಬರುವಂತೆ ಹೇಳಿದ್ದು, ಅದರಂತೆ ನಾವು ಹೂವಿನನಾಯಕನಹಳ್ಳಿ, ಬ್ರಿಗೇಡ್ ಅಪಾರ್ಟ್ ಮೆಂಟ್ಸ್ ಬಳಿ ಹೋಗಿದ್ದು, ಅಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿದ್ದು, ಅಲ್ಲಿ ಚಾಸಾ-14 ರವರು ಸ್ಥಳ ಮಹಜರ್ ಮಾಡಿದ್ದು, ಆ

ಸಂದರ್ಭದಲ್ಲಿ ನಾನು ನನ್ನ ಮೊಬೈಲ್ ನಿಂದ ಫೋಟೋ ತೆಗೆದಿರುತ್ತೇನೆ. ನಂತರ ನನ್ನ ಮೊಬೈಲ್ ನಿಂದ ಸದರಿ ಫೋಟೋವನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಈ ಬಗ್ಗೆ ಸಾಕ್ಷ್ಯಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಕಡತದಲ್ಲಿರುವ ಒಂದು ಫೋಟೋವನ್ನು ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**15**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 4 ರವರನ್ನು ಪ್ರಾಸಾ 5** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ನನ್ನ ತಂದೆ, ಚಾಸಾ-2, 3, 8 ಮತ್ತು 9 ರವರ ಪರಿಚಯ ಇರುವುದಿಲ್ಲ, ಚಾಸಾ-5 ರಿಂದ 7 ರವರ ಪರಿಚಯ ಇರುತ್ತದೆ. ಆರೋಪಿಗಳ ಪರಿಚಯ ಇರುವುದಿಲ್ಲ. ಮೃತ ಮಹಂಗು ಕಹರ್ ನನಗೆ ಪರಿಚಯ ಇರುತ್ತಾರೆ. ಆತ ಸುಮಾರು 4 ವರ್ಷಗಳ ಹಿಂದೆ ಮೃತಪಟ್ಟಿದ್ದು, ಹೇಗೆ ಮತ್ತು ಯಾವ ಕಾರಣದಿಂದ ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**16**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 5 ರವರನ್ನು ಪ್ರಾಸಾ 6** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1, 4, 6 ಮತ್ತು 7 ರವರ ಪರಿಚಯ ಇರುತ್ತದೆ. ಚಾಸಾ-2, 3, 8 ಮತ್ತು 9 ರವರ ಪರಿಚಯ ಇರುವುದಿಲ್ಲ. ಆರೋಪಿಗಳ ಪರಿಚಯ ಇರುವುದಿಲ್ಲ. ಮೃತ ಮಹಂಗು ಕಹರ್ ನನಗೆ ಪರಿಚಯ ಇರುತ್ತಾರೆ. ಆತ ಸುಮಾರು 4 ವರ್ಷಗಳ ಹಿಂದೆ ಮೃತಪಟ್ಟಿದ್ದು, ಹೇಗೆ ಮತ್ತು ಯಾವ ಕಾರಣದಿಂದ ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಂದೆ ಶವ ಪಂಚನಾಮೆ ಮಾಡಿರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**17**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 7 ರವರನ್ನು ಪ್ರಾಸಾ 7** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ಮತ್ತು 4 ರಿಂದ 6 ರವರ ಪರಿಚಯ ಇರುತ್ತದೆ. ಚಾಸಾ-2, 3, 8 ಮತ್ತು 9 ರವರ ಪರಿಚಯ ಇರುವುದಿಲ್ಲ. ಆರೋಪಿಗಳ ಪರಿಚಯ ಇರುವುದಿಲ್ಲ. ಮೃತ ಮಹಂಗು ಕಹರ್ ನನಗೆ ಪರಿಚಯ ಇರುತ್ತಾರೆ. ಆತ ಸುಮಾರು 4 ವರ್ಷಗಳ ಹಿಂದೆ ಮೃತಪಟ್ಟಿದ್ದು, ಹೇಗೆ ಮತ್ತು ಯಾವ ಕಾರಣದಿಂದ ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಂದೆ ಶವ ಪಂಚನಾಮೆ ಮಾಡಿರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**18**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 14 ರವರನ್ನು ಪ್ರಾಸಾ 8** ಎಂದು ವಿಚಾರಣೆಗೆ ಒಳಪಡಿಸಿದ್ದು, ದಿ 03.11.2021 ರಂದು ಮಧ್ಯಾಹ್ನ 03.20 ಗಂಟೆಗೆ ಚಾಸಾ-1 ರವರು ನೀಡಿದ ಮುದ್ರಿತ ದೂರನ್ನು ಪಡೆದುಕೊಂಡು ನಮ್ಮ ಠಾಣ ಮೊಕ್ಕದ್ದಮೆ ಸಂಖ್ಯೆ 211/2021 ರಂತೆ ಪ್ರ.ವ. ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿ 04.11.2021 ರಂದು ತನಿಖೆಯನ್ನು ಮುಂದುವರಿಸಿ ಘಟನಾ ಸ್ಥಳಕ್ಕೆ ಬೇಟಿ ನೀಡಿ, ಪಂಚರಾದ ಚಾಸಾ-2 ಮತ್ತು 3 ರವರಿಗೆ ನೋಟಿಸ್ ನೀಡಿ, ಅವರನ್ನು ಕರೆಯಿಸಿಕೊಂಡು ಚಾಸಾ-1 ರವರು ತೋರಿಸಿದ ಸ್ಥಳನ್ನು ಬೆಳಿಗ್ಗೆ 08.00-09.30 ಗಂಟೆವರೆಗೆ ಮಹಜರ್ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಒಂದು ಸಿಮೆಂಟ್ ಇಟ್ಟಿಗೆ ಮತ್ತು ಹೊಡೆದಿರುವ ಹಳದಿ ಬಣ್ಣದ ಹೆಲ್ಮೆಟ್ ನ್ನು ಚಾಸಾ-1 ರವರು ತೋರಿಸಿದ್ದು ಅದನ್ನು ಪಂಚರ ಸಮಕ್ಷಮದಲ್ಲಿ ಸ್ವಾಧೀನ ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ಸು ಆಗಿ ಸ್ವಾಧೀನ ಪಡಿಸಿದ ಸಿಮೆಂಟ್ ಇಟ್ಟಿಗೆ ಮತ್ತು ಹೊಡೆದಿರುವ ಹಳದಿ ಬಣ್ಣದ ಹೆಲ್ಮೆಟ್ ಗಳನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿರುತ್ತೇವೆ. ದಿ 04.11.2021 ರಂದು ಈಸ್ಟ್ ಪಾಯಂಟ್ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಸೆಂಟರ್ ಬಿದರಹಳ್ಳಿ. ಇಲ್ಲಿ ಮೃತ ಮಹಂಗು ಕಹರ್ ರವರ ಶವ ತನಿಖಾ ವರದಿಯನ್ನು ಚಾಸಾ-5 ರಿಂದ 7 ರವರ ಸಮಕ್ಷಮ

ಮಾಡಿರುತ್ತೇನೆ. ನಂತರ ಮೃತ ದೇಹವನ್ನು ಚಾಸಾ-1 ರವರ ವಶಕ್ಕೆ ನೀಡಿರುತ್ತೇವೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ 08.11.2021 ರಂದು ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ದಿ 18.05.2022 ರಂದು 1 ರಿಂದ 3ನೇ ಆರೋಪಿತರು ಖುದ್ದಾಗಿ ಠಾಣೆಗೆ ಬಂದು ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ದಿ 20.05.2022 ರಂದು ಚಾಸಾ-8 ರವರಿಗೆ ಪ್ರಕರಣಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಜರು ಮಾಡುವಂತೆ ನೋಟಿಸ್ ಜಾರಿ ಮಾಡಿರುತ್ತೇನೆ. ನಂತರ ಚಾಸಾ-8 ರವರು ಈ ಬಗ್ಗೆ ದಾಖಲೆಗಳನ್ನು ದಿ 30.05.2022 ರಂದು ತಂದು ಹಾಜರು ಮಾಡಿರುತ್ತಾರೆ. ಸದರಿ ತನಿಖೆಯು ಮುಕ್ತಾಯವಾಗಿದ್ದು ಸಾಕಷ್ಟು ಸಾಕ್ಷದಾರಗಳಿದ್ದ ಕಾರಣ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**19**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 6 ರವರನ್ನು ಪ್ರಾಸಾ 9** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1, 4, 5 ಮತ್ತು 7 ರವರ ಪರಿಚಯ ಇರುತ್ತದೆ. ಚಾಸಾ-2, 3, 8 ಮತ್ತು 9 ರವರ ಪರಿಚಯ ಇರುವುದಿಲ್ಲ. ಆರೋಪಿಗಳ ಪರಿಚಯ ಇರುವುದಿಲ್ಲ. ಮೃತ ಮಹಂಗು ಕಹರ್ ನನಗೆ ಪರಿಚಯ ಇರುವುದಿಲ್ಲ. ಆತ ಹೇಗೆ ಮತ್ತು ಯಾವಗ ಮೃತಪಟ್ಟರು ಎಂದು ನನಗೆ ಗೊತ್ತಿರುವುದಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಂದೆ ಶವ ಪಂಚನಾಮೆ ಮಾಡಿರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುತ್ತಾರೆ.

**20.** ಸದರಿ ಪ್ರಕರಣದಲ್ಲಿ ಆರೋಪಿಯ ವಿರುದ್ದ ಅಪರಾಧದ ಸಾಬೀತಿಗಾಗಿ ಪ್ರಾಸಾ.1 ರಿಂದ 9 ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ, ಪ್ರಾಸಾ.1 ರವರು ಪಿರ್ಯಾದುದಾರರು ಹಾಗೂ ಪ್ರತ್ಯಕ್ಷ ಸಾಕ್ಷಿ ಹೇಳಲಾಗಿದ್ದು ಇವರು ಅಭಿಯೋಜನೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-2 ಮತ್ತು 3 ರವರು ಮಹಜರ್ ಸಾಕ್ಷಿದಾರರಾಗಿ ಹೇಳಿದ್ದು ಅಭಿಯೋಜನೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-6 ಮತ್ತು 7 ರವರು ಸಹ ಪ್ರತ್ಯಕ್ಷ ಸಾಕ್ಷಿದಾರಾರು ಎಂದು ಹೇಳಿದ್ದು ಅಭಿಯೋಜನೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-4 ಮತ್ತು 8 ರವರು ಅಭಿಯೋಜನೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಇವರು ಪ್ರತ್ಯಕ್ಷ ಸಾಕ್ಷಿದಾರರಾಗಿರುವುದಿಲ್ಲ. ಇದು ಅಭಿಯೋಜನೆ ಪ್ರಕರಣವನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ. ಅಪರಾಧಿಕ ನ್ಯಾಯಶಾಸ್ತ್ರದ ಪ್ರಕಾರ ಆರೋಪವನ್ನು ಸಂಶಯತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆ ಸಂಪೂರ್ಣವಾಗಿ ಅಭಿಯೋಜನೆ ಮೇಲೆ ಇರುತ್ತದೆ. ಆದ್ದರಿಂದ ಆರೋಪಿಗಳು ಅಭಿಯೋಜನೆ ಹೊರಿಸಿದ ಅಪರಾಧವನ್ನು ಮಾಡಿರುತ್ತಾರೆ ಎಂಬುದನ್ನು ಸಂಶಯತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಿ ಮೇಲೆ ವಿವರಿಸಿದಂತೆ ಕಾರಣ ಮತ್ತು ಸಂಧರ್ಬಳಿಗನುಗುಣವಾಗಿ ಆರೋಪಿಗಳನ್ನು ಸದರಿ ಆಪಾಧನೆಯಿಂದ ದೋಷ ಮುಕ್ತಗೊಳಿಸುವುದು ಸೂಕ್ತವೆಂದು ಕಂಡು ಬರುತ್ತದೆ. ಆದ್ದರಿಂದ ಅಂಶ **1** ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ**.**

**21.** **ಅಂಶ ಸಂಖ್ಯೆ:2:-** ಈ ಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 252(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 3ನೇ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 304(ಎ)

ರಡಿಯಲ್ಲಿ ಹೊರಿಸಿರುವ ಆಪಾದನೆಗಳಿಂದ ಸದರಿ ಆರೋಪಿಗಳು ದೋಷಮುಕ್ತರೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಗಳು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳು ಅಫೀಲಿನ ಅವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.

ಈ ಪ್ರಕರಣದಲ್ಲಿ ಪಿ.ಎಫ್.ನಂ.**115/2021** ರಡಿಯಲ್ಲಿ ಅಮಾನತು ಪಡಿಸಿಕೊಳ್ಳಲಾದ ಐಟಂ ನಂ.**1** ಸಿಮೆಂಟ್ ಇಟ್ಟಿಗೆ **(ಮು.ಮಾ.1)** ಹಾಗೂ ಐಟಂ ನಂ.**2** ಒಂದು ಹಳದಿ ಬಣ್ಣದ ಹೆಲ್ಮೇಟ್ **(ಮು.ಮಾ.2)** ಅನುಪಯುಕ್ತ ವಸ್ತು ಆಗಿರುವುದರಿಂದ ಅಫೀಲಿನ ಅವಧಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಆದೇಶಿಸಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಬೆರಳಚ್ಚು ಪಡಿಸಿದ್ದು ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **25ನೇ ಮಾರ್ಚ್ 2026** ರಂದು ಓದಲಾಯಿತು.)

**(ವೆಂಕಟೇಶ.ಎನ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**
**ದೇವನಹಳ್ಳಿ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಪ್ರಾಸಾ 1 | : | ಬಶಿಸ್ತ್ ಖರವರ್ |
| ಪ್ರಾಸಾ 2 | : | ಶ್ರೀಧರ್ |
| ಪ್ರಾಸಾ 3 | : | ಕಾರ್ತಿಕ್ |
| ಪ್ರಾಸಾ 4 | : | ಹುಚ್ಚಪ್ಪ ವಟಾರ್ |
| ಪ್ರಾಸಾ 5 | : | ರಾಜು ಕುಮಾರ್ ಸಿಂಗ್ |
| ಪ್ರಾಸಾ 6 | : | ಚಂ ಚಂ |
| ಪ್ರಾಸಾ 7 | : | ಮಣಿ ಶಂಕರ್ ಚೌದರಿ |
| ಪ್ರಾಸಾ 8 | : | ಶಾಂತವ್ವ ಬೈಲನವರ್ |
| ಪ್ರಾಸಾ 9 | : | ಮದನ್ ಕರವಾರ್ |

**ಅಭಿಯೋಜನೆಯ ಪರ ಗುರುತಿಸಿದ ದಾಖಲಾತಿಗಳ ಪಟ್ಟಿ.**

| | | |
|---|---|---|
| ನಿಪಿಃ1 | : | ಹೇಳಿಕೆ/ದೂರು |
| ನಿಪಿಃ1(ಎ) | : | ಪ್ರಾಸಾ 1 ರವರ ಸಹಿ |
| ನಿಪಿಃ2 | : | ಮಹಜರ್ |
| ನಿಪಿಃ2(ಎ) | : | ಪ್ರಾಸಾ 1 ರವರ ಸಹಿ |

| | | |
|---|---|---|
| ನಿಪಿಃ2(ಬಿ) | : | ಪ್ರಾಸಾ 2 ರವರ ಸಹಿ |
| ನಿಪಿಃ2(ಸಿ) | : | ಪ್ರಾಸಾ 3 ರವರ ಸಹಿ |
| ನಿಪಿಃ3 | : | ಶವ ತನಿಖೆ ವರದಿ |
| ನಿಪಿಃ3(ಎ) | : | ಪ್ರಾಸಾ 6 ರವರ ಸಹಿ |
| ನಿಪಿಃ3(ಬಿ) | : | ಪ್ರಾಸಾ 7 ರವರ ಸಹಿ |
| ನಿಪಿಃ3(ಸಿ) | : | ಪ್ರಾಸಾ 8 ರವರ ಸಹಿ |
| ನಿಪಿಃ3(ಡಿ) | : | ಪ್ರಾಸಾ 9 ರವರ ಸಹಿ |
| ನಿಪಿಃ4 | : | ಮರಣೋತ್ತರ ಪರೀಕ್ಷಾ ವರದಿ |
| ನಿಪಿಃ4(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ5 ಮತ್ತು 6 | : | ಪೋಟೋಗಳು |
| ನಿಪಿಃ5(ಎ) | : | ಪ್ರಾಸಾ 4 ರವರ ಸಹಿ |
| ನಿಪಿಃ7 ರಿಂದ 9 | : | ಹೇಳಿಕೆ |
| ನಿಪಿಃ7 ರಿಂದ 9 | : | ಪ್ರಾಸಾ 5 ರಿಂದ 7 ರವರ ಸಹಿ |
| ನಿಪಿಃ10 | : | ಪ್ರ.ವ.ಮಾನ ವರದಿ |
| ನಿಪಿಃ10(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ11 | : | ಪೊಲೀಸ್ ನೋಟಿಸ್ |
| ನಿಪಿಃ11(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ12 | : | ದೃಢಿಕೃತ ಪ್ರತಿ |
| ನಿಪಿಃ12(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ13 | : | ಕಾಮಗಾರಿ ಆದೇಶ ದೃಢಿಕೃತ ಪ್ರತಿ |
| ನಿಪಿಃ13(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ14 | : | ಪತ್ರ |
| ನಿಪಿಃ14(ಎ) | : | ಪ್ರಾಸಾ 8 ರವರ ಸಹಿ |
| ನಿಪಿಃ15 | : | ಹೇಳಿಕೆ |
| ನಿಪಿಃ15(ಎ) | : | ಪ್ರಾಸಾ 9 ರವರ ಸಹಿ |

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳುಃ**

-ಇಲ್ಲ -

**ಆರೋಪಿಗಳ ಪರ ಗುರುತಿಸಿದ ದಾಖಲೆಗಳುಃ**

-ಇಲ್ಲ-

**ಅಭಿಯೋಜನೆಯ ಪರ ಗುರುತಿಸಿದ ಮುದ್ದೆ ಮಾಲುಗಳುಃ**

| | | |
|---|---|---|
| ಮು.ಮಾ.**1** | **:** | ಸಿಮೆಂಟ್ ಇಟ್ಟಿಗೆ |
| ಮು.ಮಾ.**2** | **:** | ಹಳದಿ ಬಣ್ಣದ ಹೆಲ್ಮೇಟ್ |

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**
**ದೇವನಹಳ್ಳಿ.**